**ದಿವಾಣಿ ನ್ಯಾಯಾಲಯ ಮತ್ತು ಜೆ. ಎಮ್. ಎಫ್. ಸಿ. ನ್ಯಾಯಾಲಯ, ಜೇವರ್ಗಿ**

**ಸಿಸಿ ನಂ.1007/2021**

**ಚಾಸಾ-7/ಪಿಡಬ್ಲೂ-3**

| | |
|---|---|
| **ಹೆಸರು** | ನಿಂಗನಗೌಡ ಪಾಟೀಲ |
| **ತಂದೆ ಹೆಸರು** | ತಮ್ಮನಗೌಡ |
| **ವಯಸ್ಸು** | 36 ವರ್ಷಗಳು |
| **ಉದ್ಯೋಗ** | ಅಬಕಾರಿ ನಿರೀಕ್ಷಕರು |
| **ವಾಸ ಸ್ಥಳ** | ಕಲಬುರಗಿ |

**ಸಾಕ್ಷಿಯನ್ನು ದಿನಾಂಕ 01-12-2025 ರಂದು ಸಾಕ್ಷಿಯನ್ನ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭೀಯೋಜಕರಿಂದ.**

2017 ರಿಂದ ನವೆಂಬರ್-2020 ರವರಿಗೆ ಅಬಕಾರಿ ಉಪ ನೀರಿಕ್ಷಕನಾಗಿ ಪೊಲೀಸ್ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕ 24.04.2020 ರಂದು ಈ ಪ್ರಕರಣದ ಕಡತವನ್ನು ಚಾಸಾ-1 ರವರಿಂದ ಪಡೆದು ದಿನಾಂಕ 24.07.2020 ರಂದು ಪ್ರಕರಣದಲ್ಲಿ ವಶಪಡಿಸಿಕೊಂಡ ಮುದ್ದೆಮಾಲಗಳನ್ನು FSL ವರದಿಗಾಗಿ ಚಾಸಾ-4 ರವರ ಮುಖಾಂತರ ಕಳುಹಿಸಿರುತ್ತೇನೆ. ಸಾಕ್ಷಿ FSL ಗಾಗಿ ಕಳಿಸಿದ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-6 ಎಂದು ಸಾಕ್ಷಿ ಸಹಿಯನ್ನು ನಿಪಿ-6(ಎ) ಎಂದು ಗುರುಸಲಾಯಿತು. ದಿನಾಂಕ 25.07.2020 ರಂದು FSL ವರದಿ ಪಡೆದಿರುತ್ತೇನೆ. ದಿನಾಂಕ 25.07.2020 ರಂದು ಚಾಸಾ-4 ರವರ ಹೇಳಿಕೆ ಪಡೆದಿರುತ್ತೇನೆ. ಸಾಕ್ಷಿ FSL ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-5 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ-5(ಎ) ಎಂದು ಗುರುಸಲಾಯಿತು. ದಿನಾಂಕ 25.04.2020 ರಂದು ಚಾಸಾ-5 ರವರನ್ನು ಆರೋಪಿ ಪತ್ತೆ ಕುರಿತು ನಿಯೋಜಿಸಿರುತ್ತೇನೆ. ದಿನಾಂಕ 27.04.2020 ಮತ್ತು 30.07.2020 ರಂದು ಚಾಸಾ-5 ರವರಿಂದ ಅರೋಪಿ ಪತ್ತೆ ಕುರಿತು ವರದಿಗಳನ್ನು ಪಡೆದಿರುತ್ತೇನೆ. ಸಾಕ್ಷಿ ಸದರಿ ವರದಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-7 ಮತ್ತು 8 ಎಂದು ಗುರುತಿಸಲಾಯಿತು. ದಿನಾಂಕ 05.08.2020 ಆರೋಪಿತನ ಮನೆಯ ಮಾಲಿಕತ್ವದ ಕುರಿತು ಪಿಡಿಒ ಅಂಕಲಗಿರವರಿಗೆ ಪತ್ರ ಬರೆದಿರುತ್ತೇನೆ. ಸಾಕ್ಷಿ ಸದರಿ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-9 ಎಂದು, ಸಾಕ್ಷಿ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ದಿನಾಂಕ 11.08.2020 ರಂದು ಪಿಡಿಒ ಅಂಕಲಗಿರವರಿಂದ ವರದಿ ಪಡೆದಿರುತ್ತೇನೆ. ಸಾಕ್ಷಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-10 ಎಂದು ಎಂದು ಗುರುತಿಸಲಾಯಿತು. ಗುನ್ಹೆ ಜಾಗದ ಮನೆಯು ಆರೋಪಿಗೆ ಸೇರಿದ್ದು ಎಂದು ವರದಿ ನೀಡಿರುತ್ತಾರೆ. ಸಾಕ್ಷಿ ಮನೆಯ ಉತಾರೆಯನ್ನು

ನೋಡಿ ಗುರುತಿಸಿದ್ದು ಅದನ್ನು ನಿಪಿ-11 ಎಂದು ಗುರುತಿಸಲಾಯಿತು. ದಿನಾಂಕ 12.08.2020 ರಂದು ತನಿಖೆ ಮುಗಿಸಿ ಆರೋಪಿ ವಿರುದ್ದ ಆರೋಪ ಸಾಬಿತ್ತಾದ್ದರಿಂದ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

<u>ಪಾಟೀ ಸವಾಲುಃ ಆಪಾದಿತರ ಪರ ವಕೀಲರಿಂದ:</u>

ನಾನು ಈ ಪ್ರಕರಣದ ಕಡತವನ್ನು ಪಡೆದ ನಂತರ ದಿನಾಂಕ 05.08.2020 ಗುನ್ನೆ ಸ್ಥಳಕ್ಕೆ ಭೇಟಿ ನೀಡಿರುತ್ತೇನೆ. ಕಡತ ಪಡೆದು 4-ತಿಂಗಳ ನಂತರ ಘಟನಾ ಸ್ಥಳಕ್ಕೆ ಹೋಗಿರುತ್ತೀರಿ ಎಂದರೆ ಸಾಕ್ಷಿ ಕಚೇರಿ ಕೆಲಸ ಹೆಚ್ಚಾಗಿರುವುರಿಂದ ಹೋಗಿರುವುದಿಲ್ಲ ಎಂದು ಹೇಳುತ್ತಾರೆ. ನಾನು ಗ್ರಾಮ ಪಂಚಾಯತಿ ಕಚೇರಿಗೆ ಹೋದಾಗ ಗುನ್ನೆ ಜಾಗಕ್ಕೆ ಹೋಗಿರುತ್ತೇನೆ. ಗುನ್ನೆ ಜಾಗದ ಅಕ್ಕಪಕ್ಕದಲ್ಲಿ ಮನೆಗಳಿದ್ದು ಜೇರಟಗಿ - ಗಾಣಗಾಪೂರ ಮುಖ್ಯ ರಸ್ತೆಯಿದೆ ಎಂದರೆ ಸರಿ. ಗುನ್ನೆ ಜಾಗದ ಮನೆಯ ಅಳತೆ ಮತ್ತು ಎಷ್ಟು ಕೋಣೆಗಳಿವೆ ಎಂದು ನನಗೆ ಗೊತ್ತಿಲ್ಲ. ವಶಪಡಿಸಿಕೊಂಡ ಮುದ್ದೆಮಾಲುಗಳು ಯಾವ ಸ್ಥಳದಿಂದ ವಶಪಡಿಸಿಕೊಂಡಿರುತ್ತಾರೆ ಮತ್ತು ಸದರಿ ಮನೆಯ ಬಾಗಿಲು ಯಾವ ದಿಕ್ಕಿಗೆ ಇದೆ ಎಂದು ನನಗೆ ಗೊತ್ತಿಲ್ಲ. ಈ ಪ್ರಕರಣದಲ್ಲಿ ಸ್ವಂತ್ರ ಪಂಚರು ಇಲ್ಲ ನಮ್ಮ ಇಲಾಖಾ ಸಿಬ್ಬಂದಿಗಳೆ ಪಂಚರಾಗಿರುತ್ತಾರೆ ಎಂದರೆ ಸರಿ. ನಮ್ಮ ಇಲಾಖಾ ಸಿಬ್ಬಂದಿಗಳನ್ನು ಪಂಚರನ್ನಗಿ ಮಾಡಲು ನಿಯಮವಿದೆಯೆ ಎಂದರೆ ಸಾಕ್ಷಿ ಕರೋನಾ ಇದ್ದರಿಂದ ಬೇರೆ ಯಾರು ಪಂಚರಾಗದ ಕಾರಣ ಸಿಬ್ಬಂದಿಗಳನ್ನು ಪಂಚರನ್ನಾಗಿ ಮಾಡಿರುತ್ತಾರೆ ಎಂದು ಹೇಳುತ್ತಾರೆ.

ಈ ಪ್ರಕರಣದಲ್ಲಿ ವಶಪಡಿಸಿಕೊಂಡ ಮುದ್ದೆಮಾಲಗಳನ್ನು FSL ವರದಿಗಾಗಿ ಚಾಸಾ-4 ರವರ ಮುಖಾಂತರ ಕಳುಹಿಸಿ ಆ ಕುರಿತು FSL ವರದಿ ಪಡೆದು, ಚಾಸಾ-4 ರವರ ಹೇಳಿಕೆ ಪಡೆದು, ಚಾಸಾ-5 ರವರನ್ನು ಆರೋಪಿ ಪತ್ತೆ ಕುರಿತು ನಿಯೋಜಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ವಿರುದ್ದ ಯಾವುದೇ ಆರೋಪ ಸಾಬಿತಾಗದೆ ಇದ್ದರು ಸಹ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ಸಾಕ್ಷಿದಾರರು ಹೇಳಿದಂತೆ ನನ್ನ ಉಕ್ತ ಲೇಖನಕ್ಕೆ ಕಂಪ್ಯೂಟರ್ ನಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ.ಕೇ. ಸರಿ ಇರುತ್ತದೆ

ಜೆ.ಎಮ್.ಎಫ್.ಸಿ.
ಜೇವರ್ಗಿ